## ನಿಮ್ಮೊಡನೆ

# ಮದುವೆ, ಸಾಲ, ಸರಳ ವಿವಾಹ...

ಮದುವೆ ಸಾವಿರಾರು ಜನರಿಗೆ ಕೆಲಸ ಕೊಟ್ಟಿವೆ. ಕಲ್ಯಾಣಮಂಟಪ, ಕೇಟರಿಂಗ್ ಸೇವೆ, ಆಮಂತ್ರಣ ಪತ್ರಿಕೆ ಮುದ್ರಣಾಲಯ, ಛಾಯಾಗ್ರಹಣ, ವಿಡಿಯೊ ಚಿತ್ರೀಕರಣ, ಆಭರಣ, ದಿರಿಸು, ಮೇಕಪ್ ಒಳಗೊಂಡಂತೆ ಬೇರೆ ಬೇರೆ ಕ್ಷೇತ್ರಗಳ ಮಂದಿಗೆ ವಿವಾಹಗಳೇ ಜೀವನೋಪಾಯ.

ಮದುವೆ ಎಂಬ ಬಾಳಸಾಂಗತ್ಯದ ವಿಧಿಯನ್ನು ಸರಳಗೊಳಿಸುವ ಪ್ರಯತ್ನಗಳು ನಮ್ಮಲ್ಲಿ ಬಹಳ ಹಿಂದಿನಿಂದಲೂ ನಡೆದಿವೆ. ಆದರೆ ಅಂತಹ ಪ್ರಯತ್ನಗಳಿಂದ ಏಕೋ ಏನೋ ನಿರೀಕ್ಷಿತ ಫಲ ದೊರೆತಿಲ್ಲ; ಸನಿಹದ ದಿನಮಾನಗಳಲ್ಲಿ ದೊರೆಯಬಹುದಾದ ಸೂಚನೆಗಳೂ ಸಿಗುತ್ತಿಲ್ಲ. ಆಧುನಿಕತೆ, ವಿದ್ಯಾಭ್ಯಾಸ, ಪ್ರೇಮವಿವಾಹ, ಅಂತರ್ಜಾತಿ ವಿವಾಹ... ಇವು ಯಾವುದರಿಂದಲೂ ಈ ವಿಧಿಗೆ ಸುತ್ತಿಕೊಂಡಿರುವ ಗೋಜಲುಗಳನ್ನು ಬಿಡಿಸಲು ಆಗಿಲ್ಲ. ಬದಲಿಗೆ, ಮದುವೆ ಎಂಬುದು ದಿನೇ ದಿನೇ ಮತ್ತಷ್ಟು ಸಂಕೀರ್ಣ ಸ್ವರೂಪ ಪಡೆಯುತ್ತಲೇ ಇದೆ.

ವಿವಾಹ ಎಂಬುದು ಬದುಕಿನ ಅವಿಸ್ಮರಣೀಯ ಕ್ಷಣ ಎಂಬ ಭಾವನೆ ನಮ್ಮಲ್ಲಿ ಇದೆ. ಸ್ಮರಣೀಯ ಎನ್ನುವ ಆ ಭಾವನೆಯೇನೋ ಸರಿ. ಆದರೆ, ಎರಡು ಜೀವಗಳ ಬೆಸುಗೆಗೆ ಅನ್ವಯ ಆಗುವಂತಹ ಆ ಭಾವನೆಯನ್ನು ಸಮಾರಂಭ ಆಯೋಜನೆಗೆ ಅನ್ವಯಿಸಿ ನೋಡುವಂತಹ ಪರಿಪಾಟ ಬೆಳೆದಿದೆಯಲ್ಲ, ಅದು ಎಲ್ಲ ಎಡವಟ್ಟುಗಳಿಗೆ ಮೂಲ ಕಾರಣವಾಗಿದೆ.

ಮದುವೆಗೆ ಸಂಬಂಧಿಸಿದ ಕುತೂಹಲದ ಸುದ್ದಿಯೊಂದು ಇತ್ತೀಚೆಗೆ ಇಂಗ್ಲಿಷ್ ದೈನಿಕವೊಂದರಲ್ಲಿ ಪ್ರಕಟವಾಗಿತ್ತು. ಮದುವೆಗೂ ಸಾಲಕ್ಕೂ ಇರುವ ನಂಟು ಹೇಗೆ ಬಲಗೊಳ್ಳುತ್ತಲೇ ಇದೆ ಎಂಬುದಕ್ಕೆ ಅಲ್ಲಿನ ಅಂಕಿ–ಅಂಶಗಳೇ ಪುರಾವೆ ಒದಗಿಸಿದ್ದವು. ವಿಶ್ವ ವಿವಾಹ ದಿನದ (ಫೆ. 9) ಹಿನ್ನೆಲೆಯಲ್ಲಿ ಅದು ಬೆಳಕು ಕಂಡಿತ್ತು. ಮದುವೆ ಸಲುವಾಗಿ ಸಾಲ ಪಡೆಯಲು ಅರ್ಜಿ ಸಲ್ಲಿಸಿದವರ ಸಂಖ್ಯೆ ಗಣನೀಯವಾಗಿ ಹೆಚ್ಚಳಗೊಂಡಿದೆ ಎಂಬುದೇ ಆ ಕುತೂಹಲದ ಸಂಗತಿ. ಡಿಜಿಟಲ್ ಸಾಲವ್ಯವಸ್ಥೆಗೆ ವೇದಿಕೆಯಾಗಿರುವ ‘ಇಂಡಿಯಾಲೆಂಡ್ಸ್’ ದಾಖಲಿಸಿರುವ ಈ ಅಂಕಿ– ಅಂಶಗಳ ಪ್ರಕಾರ ದೇಶದ ಮಹಾನಗರಗಳಲ್ಲಿ 2019–20ರಲ್ಲಿ ಸಾಲ ಪಡೆಯಲು ಸಲ್ಲಿಕೆಯಾಗಿರುವ ಅರ್ಜಿಗಳಲ್ಲಿ ಅದರ ಹಿಂದಿನ ವರ್ಷಕ್ಕೆ ಹೋಲಿಸಿದರೆ ಸರಾಸರಿ ಶೇಕಡ 46ರಷ್ಟು ಏರಿಕೆ ಆಗಿದೆಯಂತೆ!

ಅರ್ಜಿ ಸಲ್ಲಿಕೆಯಲ್ಲಿ ಆಗಿರುವ ಹೆಚ್ಚಳದಲ್ಲಿ ದೆಹಲಿ (ಎನ್‌ಸಿಆರ್) ಅಗ್ರಸ್ಥಾನ ಪಡೆದಿದೆ. ಈ ಪ್ರದೇಶವು ಶೇ 98ರಷ್ಟು ಹೆಚ್ಚಳ ದಾಖಲಿಸಿದೆ. ನಂತರದ ಸ್ಥಾನವನ್ನು ಕೋಲ್ಕತ್ತ (ಶೇ 67) ಪಡೆದಿದೆ. ಮುಂಬೈನಲ್ಲಿ ಈ ಪ್ರಮಾಣ ಶೇ 51ರಷ್ಟು. ನಮ್ಮ ಬೆಂಗಳೂರಿನಲ್ಲಿ ಶೇ 44ರಷ್ಟು ಹೆಚ್ಚಳ ಆಗಿದೆ. ಚೆನ್ನೈನಲ್ಲಿ ಕನಿಷ್ಠ ಅಂದರೆ ಶೇ 17ರಷ್ಟು ಮಾತ್ರ ಹೆಚ್ಚಳ ಆಗಿದೆ. ಎರಡನೇ ಹಂತದ ನಗರಗಳಲ್ಲೂ ಹೆಚ್ಚಳ ಉಂಟಾಗಿದೆ. ಲಖನೌ, ವಿಶಾಖಪಟ್ಟಣ, ಇಂದೋರ್ ನಗರಗಳು ಹೆಚ್ಚಳದಲ್ಲಿ ಮುಂಚೂಣಿಯಲ್ಲಿವೆ. ಸಾಲದ ಮೊತ್ತದ ಬೇಡಿಕೆ ₹ 2 ಲಕ್ಷದಿಂದ ₹ 30 ಲಕ್ಷದವರೆಗೂ ಚಾಚಿದೆ ಎಂದು ವರದಿಯಾಗಿದೆ.

ಮದುವೆ ಮತ್ತು ಸಾಲಕ್ಕೆ ಇರುವ ನಂಟಿಗೆ ಇನ್ನೊಂದು ಆಯಾಮವೂ ಇದೆ. ಆ ಹೊರೆ ನೇರವಾಗಿ ಹೆಣ್ಣು ಹೆತ್ತವರ ಮೇಲೆ ಬೀಳುವುದೇ ಹೆಚ್ಚು. ಪರಿಣಾಮವಾಗಿ ಹೆಣ್ಣುಮಕ್ಕಳ ಕುರಿತು ಅಸಡ್ಡೆ, ಹೆಣ್ಣುಭ್ರೂಣ ಹತ್ಯೆಯಂತಹ ಸಮಸ್ಯೆಗಳ ಉಲ್ಬಣಕ್ಕೂ ಕಾರಣವಾಗಿದೆ. ಆದಕಾರಣ ಮದುವೆಯ ವಿಧಿಯನ್ನು ಸರಳಗೊಳಿಸುವ ಪ್ರಯತ್ನಗಳು ಬೇರೆ ಬೇರೆ ನೆಲೆಗಳಿಂದ ಬಿರುಸು ಪಡೆಯಬೇಕಾದ ಅಗತ್ಯ ಇದೆ.

ಕರ್ನಾಟಕ ಸರ್ಕಾರವು ‘ಸಪ್ತಪದಿ’ ಹೆಸರಿನಲ್ಲಿ ಆಯ್ದ 100ಕ್ಕೂ ಹೆಚ್ಚು ದೇವಸ್ಥಾನಗಳಲ್ಲಿ ಸಾಮೂಹಿಕ ವಿವಾಹ ಏರ್ಪಡಿಸಲು ಮುಂದಾಗಿರುವುದು ಅನುಕರಣೀಯ ನಡೆ. ಕೆಲವು ಧಾರ್ಮಿಕ ಕೇಂದ್ರಗಳು ಕೂಡ ಸಾಮೂಹಿಕ ವಿವಾಹ ಕಾರ್ಯಕ್ರಮಗಳನ್ನು ಆಯೋಜಿಸುತ್ತಿವೆ. ಸಮಾಜದಲ್ಲಿ ಪ್ರಭಾವಿಗಳು ಅನ್ನಿಸಿಕೊಂಡವರು ತಮ್ಮ ಮಕ್ಕಳ ಮದುವೆಯನ್ನು ಕೂಡ ಇಂತಹ ಕಾರ್ಯಕ್ರಮಗಳಲ್ಲಿ ನೆರವೇರಿಸುವ ಮೂಲಕ ಸರಳ ವಿವಾಹಗಳ ಅಗತ್ಯವನ್ನು ಮನಗಾಣಿಸುವ ಕೆಲಸಕ್ಕೆ ಕೈಜೋಡಿಸಬೇಕು.

ಮದುವೆ ಸಮಾರಂಭಗಳು ಸಾವಿರಾರು ಜನರಿಗೆ ಕೆಲಸ ಕೊಟ್ಟಿವೆ. ಕಲ್ಯಾಣಮಂಟಪ, ಕೇಟರಿಂಗ್ ಸೇವೆ, ಆಮಂತ್ರಣ ಪತ್ರಿಕೆ ಮುದ್ರಣಾಲಯ, ಛಾಯಾಗ್ರಹಣ, ವಿಡಿಯೊ ಚಿತ್ರೀಕರಣ, ಆಭರಣ, ದಿರಿಸು, ಮೇಕಪ್ ಒಳಗೊಂಡಂತೆ ಬೇರೆ ಬೇರೆ ಕ್ಷೇತ್ರಗಳ ಮಂದಿಗೆ ವಿವಾಹಗಳೇ ಜೀವನೋಪಾಯ. ಆದರೆ, ಕೆಲವರಿಗೆ ಆಗುತ್ತಿರುವ ಈ ಪ್ರಯೋಜನವು ಮದುವೆಗಳಿಂದ ಕುಟುಂಬಗಳ ಮೇಲೆ ಬೀಳುತ್ತಿರುವ ಹೊರೆ, ಸಾಲದ ಸುಳಿ, ಸೃಷ್ಟಿಸುತ್ತಿರುವ ಒತ್ತಡ, ಪೋಲಾಗುತ್ತಿರುವ ಆಹಾರ... ಇವುಗಳ ಎದುರು ಗೌಣವೆನಿಸಿಬಿಡುತ್ತದೆ. ಸಂಪತ್ತನ್ನು ವಿಕಾರ ರೂಪದಲ್ಲಿ ಪ್ರದರ್ಶಿಸುವ ಪರಿಪಾಟ ಹೆಚ್ಚುತ್ತಿರುವ ಈ ಸಂದರ್ಭವು ಸರಳ ವಿವಾಹಕ್ಕಾಗಿ ಆಂದೋಲನದ ಅಗತ್ಯವನ್ನೂ ಸಾರಿಹೇಳುತ್ತಿದೆ.

■ ಎನ್. ಉದಯಕುಮಾರ್



ಈಶ್ವರ್